ಸಿರಿಯಾದ ಶಿಬಿರಗಳಲ್ಲಿರುವವರು ಹೇಗಿದ್ದಾರೆ? ಅವರ ದಿನಚರಿ ಹೇಗಿದೆ ಎನ್ನುವುದು ಕುತೂಹಲಕಾರಿ. ಹಿಂಸಾಚಾರ ಪೀಡಿತ ಪ್ರದೇಶಗಳ ಜನರು ಅನುಭವಿಸಿದ ಸಂಕಟಗಳು ಮತ್ತು ಎದುರಿಸುತ್ತಿರುವ ಸಮಸ್ಯೆಗಳು ಹೊರ ಜಗತ್ತಿಗೆ ಅಷ್ಟಾಗಿ ಗೊತ್ತಿಲ್ಲ. ಗೊತ್ತಿರುವುದೆಲ್ಲ ಅರೆ ಬರೆ ಮಾಹಿತಿಗಳನ್ನು ಆಧರಿಸಿದ ಅರ್ಧಸತ್ಯದ ವಿದ್ಯಮಾನಗಳು.

ಸದ್ಯಕ್ಕೆ ಸಿರಿಯಾ ಜಗತ್ತಿನಲ್ಲೇ ಅತಿ ಹೆಚ್ಚಿನ ಹಿಂಸಾಚಾರಕ್ಕೆ ತುತ್ತಾಗಿರುವ ದೇಶ. ರಾಜಧಾನಿ ಡಮಾಸ್ಕಸ್ ಮತ್ತೆ ತಲೆ ಎತ್ತಿ ನಿಲ್ಲುವುದು ಕಷ್ಟ ಸಾಧ್ಯ. ಅದೀಗ ಅಕ್ಷರಶಃ ಪ್ರೇತಗಳ ನಗರವಾಗಿದೆ. ಡಮಾಸ್ಕಸ್‌ನ ದುಃಸ್ಥಿತಿಯ ಮೇಲೆ ಬೆಳಕು ಚೆಲ್ಲುವ 'ದ ಸಿಟಿ ಆಫ್ ಘೋಸ್ಟ್' ಹೆಸರಿನ 90 ನಿಮಿಷಗಳ ಅಮೆರಿಕಾದ ಸಾಕ್ಷ್ಯಚಿತ್ರ 2017ರಲ್ಲಿ ಬಿಡುಗಡೆಯಾಯಿತು. ಮ್ಯಾಥ್ಯು ಹೀನ್‌ಮ್ಯಾನ್ ಅದರ ನಿರ್ದೇಶಕರು.

ಲೆಬನಾನ್‌ನ ಪುನರ್ವಸತಿ ಶಿಬಿರಗಳಲ್ಲಿ ಆಶ್ರಯ ಪಡೆದಿರುವ ಸಿರಿಯನ್ನರ ಸ್ಥಿತಿ ಗತಿಗಳ ಮೇಲೆ ಬೆಳಕು ಚೆಲ್ಲುವ 'ಲಾಸ್ಟ್ ಇನ್ ಲೆಬನಾನ್' ಹೆಸರಿನ ಇನ್ನೊಂದು ಸಾಕ್ಷ್ಯಚಿತ್ರ (2017) ತೆರೆಕಂಡಿದೆ. ಜಾರ್ಜಿಯಾ ಸ್ಕಾಟ್ ಮತ್ತು ಸೋಫಿಯಾ ಸ್ಕಾಟ್ ಇದರ ನಿರ್ದೇಶಕರು. 'ಕ್ರೈಸ್ ಫ್ರಂ ಸಿರಿಯಾ' ಹೆಸರಿನ ಮತ್ತೊಂದು ಚಿತ್ರವೂ ಇದೆ. ಅಫ್‌ನೀವ್ಸ್ಕಿ ಇದರ ನಿರ್ದೇಶಕರು.

ಹಿಂಸಾಚಾರದಲ್ಲಿ ತೊಡಗಿರುವ ಉಗ್ರರು ಮತ್ತು ಸಿರಿಯಾ ಸೇನೆ ಮತ್ತು ಇತರ ದಾಳಿಕೋರ ಪಡೆಗಳ ಕಣ್ಣು ತಪ್ಪಿಸಿ, ಮಾಧ್ಯಮಗಳು, ಸ್ವಾತಂತ್ರ್ಯ, ಸಮಾನತೆ ಮತ್ತು ಗೌರವದ ಬದುಕಿಗೆ ಹಂಬಲಿಸುವ ಹತ್ತಾರು ಸಂಘಟನೆಗಳ ಸದಸ್ಯರು ಆಗಾಗ ದಾಖಲಿಸಿಕೊಂಡ ವಿಡಿಯೊ ಫೂಟೇಜುಗಳು ಹಾಗೂ ಸ್ಥಿರ ಚಿತ್ರಗಳನ್ನೆಲ್ಲ ಜೋಡಿಸಿ ರೂಪಿಸಿದ ಹಲವಾರು ಸಾಕ್ಷ್ಯಚಿತ್ರಗಳೂ ಸಿರಿಯಾದ ದುಃಸ್ಥಿತಿಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಿವೆ. ಸಿರಿಯಾದಲ್ಲಿ ಸಿನಿಮಾ ನಿರ್ಮಿಸುವ ವಾತಾವರಣ ಈಗಿಲ್ಲ.

